> **ಚಾಲಕ ಪಿಸ್ತೂಲ್ ಅಥವಾ ಚಾಕು ಹಿಡಿದು ಬಂದರೆ, ತಾನು ತಕ್ಷಣ ಹಣವನ್ನು ಅವನಿಗೆ ಕೊಟ್ಟು, ಸಾಯಿಸಬೇಡ, ಏರ್‌ಪೋರ್ಟಿಗೆ ಬಿಡು ಎಂದು ಹೇಳಬೇಕೆಂದುಕೊಂಡ.**

ವಿಶ್ರಾಂತಿಕೊಠಡಿಗೆ ಹೋಗಿ ಕೈಕಾಲುಗಳನ್ನು ತೊಳೆದು ಸುಮರು ಆರೂವರೆ ಗಂಟೆಗೆ ಆಟೊವನ್ನು ಹಿಡಿಯುತ್ತಾನೆ. ಸುಮಾರು ಏಳು ಗಂಟೆಗೆ ಏರ್‌ಪೋರ್ಟ್ ತಲುಪುತ್ತಾನೆ. ದಿಲ್ಲಿಗೆ ಹೋಗುವ ವಿಮಾನ ಎಂಟು ಗಂಟೆಗೆ ಹೊರಡುತ್ತದೆ. ಅವನು ಕ್ಲಾಸ್ ಒನ್ ಅಧಿಕಾರಿಯಾಗಿದ್ದರಿಂದ, ದಿಲ್ಲಿಯ ಕಚೇರಿಯ ಕಡೆಗೆ ಡ್ಯೂಟಿಗೆ ಹೋಗುವಾಗ ಅಹಮದಾಬಾದಿನಿಂದ ದಿಲ್ಲಿ ವಿಮಾನದಲ್ಲಿಯೇ ಹೋಗುತ್ತಾನೆ. ಇಂದು ಇಂಟರ್‌ಸಿಟಿ ರೈಲು ಆರೂವರೆ ಗಂಟೆಗೆ ಸ್ಟೇಷನ್ನಿಗೆ ಬಂದಿತ್ತು. ಹೀಗಾಗಿ ಅವನು ಕಾರಿನಿಂದ ಇಳಿದು ನೇರವಾಗಿ ಪ್ಲಾಟ್‌ಫಾರ್ಮಿನಿಂದ ಹೊರಗೆ ಬಂದಿದ್ದ. ಇಂದು ಅವನು ಆಟೊ ರಿಕ್ಷಾ ಚಾಲಕನೊಂದಿಗೆ ಬಾಡಿಗೆಯ ವಿಷಯದಲ್ಲಿ ವಾದ ಮಾಡಿರಲಿಲ್ಲ. ಚಾಲಕ ಹೇಳಿದ್ದ ಅರವತ್ತು ರೂಪಾಯಿಗಳಿಗೆ ಅವನು ಒಪ್ಪಿಕೊಂಡ. ಎದುರಿಗೆ ನಿಂತಿದ್ದ ಪೊಲೀಸು ದೊಣ್ಣೆಯನ್ನೆತ್ತಿ ಚಾಲಕನಿಗೆ ಕೂಡಲೇ ಅಲ್ಲಿಂದ ಹೋಗುವಂತೆ ಹೇಳುತ್ತಿದ್ದ; ಹೀಗಾಗಿ ಹೋಗುತ್ತಿದ್ದ ರಿಕ್ಷಾದಲ್ಲಿ ಬ್ಯಾಗನ್ನು ಎಸೆದು, ಅದರಲ್ಲಿ ಹಾರಿ ಬಂದು ಕೂತಿದ್ದ. ಅದಕ್ಕೇ ಅವನು ಆಟೊ ಚಾಲಕನ ಮುಖವನ್ನು ಸರಿಯಾಗಿ ಗಮನಿಸಿರಲಿಲ್ಲ. ಈಗ ಬೆಳಕಿನಲ್ಲಿ ಆಟೊದಲ್ಲಿ ಹಾಕಿದ್ದ ಕನ್ನಡಿಯಲ್ಲಿ ಆಟೊ ಚಾಲಕನ ಮುಖವನ್ನು ನೋಡಿದಾಗ ಅವನಿಗೆ ಸ್ವಲ್ಪ ಆಘಾತವಾಯಿತು. ಚಾಲಕನ ಮೀಸೆಗಳು ದೊಡ್ಡದಾಗಿದ್ದವು. ದೊಡ್ಡ ಮೀಸೆ ಇರುವವರು ಕಡಿಮೆ ಪ್ರಮಾಣದಲ್ಲಿ ಕುಲೀನರಾಗಿರುತ್ತಾರೆ ಎಂದು ಅವನಿಗೆ ಯಾಕೆ ಅನ್ನಿಸಿತ್ತೋ, ತಿಳಿದಿರಲಿಲ್ಲ. ಅವನು ಮತ್ತೆ ಕನ್ನಡಿಯಲ್ಲಿ ನೋಡಿದ. ಚಾಲಕನ ಕಣ್ಣುಗಳು ಸಹ ತುಂಬಾ ಕಪ್ಪಗಿದ್ದವು. ಮನುಷ್ಯನ ಬಣ್ಣಕ್ಕೂ, ಅವನ ಸಜ್ಜನಿಕೆಗೂ ಯಾವುದೇ ಸಂಬಂಧವಿರುವುದಿಲ್ಲ ಎಂಬುದು ಅವನಿಗೆ ತಿಳಿದಿದೆ. ಆದರೂ ಕಪ್ಪು ಬಣ್ಣದ ಮನುಷ್ಯರು, ವಿಶ್ವಾಸಕ್ಕೆ ಯೋಗ್ಯರು ಎಂದು ಅವನಿಗೆ ಅನ್ನಿಸುವುದಿಲ್ಲ. ಅದಕ್ಕೆ ಅವನ ಬಣ್ಣ ಸ್ವಚ್ಛವಾಗಿವುದು ಕಾರಣವಾಗಿರಬಹುದು.

ಚಾಲಕನ ಮೀಸೆಗಳು ಕಪ್ಪು ಬಣ್ಣದವು, ರಿಕ್ಷಾ ಸರಿಯಾದ ಮಾರ್ಗದಲ್ಲಿ ಹೋಗುತ್ತಿಲ್ಲ ಎಂಬ ಅವನ ಯೋಚನೆಯನ್ನು ದೃಢಪಡಿಸಿತು. ಈ ಯೋಚನೆ ಬರುತ್ತಲೇ ಅವನ ಶರೀರದಲ್ಲಿ ಭಯದ ಅಲೆಯೊಂದು ಸಂಚರಿಸಿತು. ಅವನ ಮುಖದಲ್ಲಿ ಬೆವರು ಮೂಡಿತು. ಬೆವರಿನಿಂದಾಗಿ ಅವನ ಕೈಗಳು ಸಹ ಒದ್ದೆಯಾಗುತ್ತಿದ್ದವು. ಅವನು ಜೇಬಿನಿಂದ ಕರ್ಚೀಫು ತೆಗೆದು ಮುಖ ಮತ್ತು ಕೈಗಳನ್ನು ಒರೆಸಿಕೊಂಡ. ಆಟೊ ತನ್ನದೇ ಆದ ವೇಗದಿಂದ ರಸ್ತೆಯಲ್ಲಿ ಓಡುತ್ತಿತ್ತು.

ಚಾಲಕನಿಗೆ ಹೇಳಿ ರಸ್ತೆಯಲ್ಲಿ ಆಟೊ ರಿಕ್ಷಾವನ್ನು ನಿಲ್ಲಿಸಿ ಕೆಳಗಿಳಿಯಬೇಕೆಂಬ ಯೋಚನೆ ಬಂತು, ಆದರೆ ಹೀಗೆ ಮಾಡುವುದು ಕಷ್ಟವೆನ್ನಿಸಿತು. ಮೊದಲನೆಯದಾಗಿ, ತಾನು ಹೇಳಿದರೆ ಚಾಲಕ ಆಟೊ ರಿಕ್ಷಾವನ್ನು ನಿಲ್ಲಿಸುತ್ತಾನೆ ಎಂಬ ವಿಶ್ವಾಸ ಅವನಿಗಿರಲಿಲ್ಲ; ಎರಡನೆಯದಾಗಿ, ಆ ಮಾರ್ಗದಲ್ಲಿ ಒಂದಿಬ್ಬರು ಮಾತ್ರ ಹಾದು ಹೋಗುತ್ತಿದ್ದರು, ಅಲ್ಲದೆ ಬೇರೊಂದು ಆಟೊ ರಿಕ್ಷಾ ಸಿಗುವ ಭರವಸೆ ಸಹ ಇರಲಿಲ್ಲ. ಈಗಾಗಲೇ ಸಾಕಷ್ಟು ವಿಳಂಬವಾಗುತ್ತಿತ್ತು; ಬೇರೆ ಆಟೊ ರಿಕ್ಷಾ ಸಿಗದಿದ್ದರೆ ಸಮಯಕ್ಕೆ ಸರಿಯಾಗಿ ಏರ್‌ಪೋರ್ಟಿಗೆ ಹೋಗುವುದು ಕಷ್ಟವಾಗುತ್ತಿತ್ತು. ಅವನು ಆ ವಿಮಾನವನ್ನು ತಪ್ಪಿಸಿಕೊಳ್ಳಲು ಬಯಸುತ್ತಿರಲಿಲ್ಲ; ಕಾರಣ, ದಿಲ್ಲಿಯಲ್ಲಿ ಹನ್ನೊಂದು ಗಂಟೆಗೆ ನಡೆಯುವ ಮೀಟಿಂಗಿನ ಅಧ್ಯಕ್ಷತೆಯನ್ನು ಸ್ವತಃ ಮಂತ್ರಿಗಳು ವಹಿಸುವವರಿದ್ದರು.